


ಪಕ್ಷಿ ಬಳಿ ಕೋಮಲ್ ಹೇಳುತ್ತಿದ್ದ ಪಕ್ಕದ ಮನೆ ಹೆಂಗಸು ಚಕ್ಲಿ ಕೊಟ್ಟಳು ಕಣೋ, ಎಷ್ಟು ತೆಳ್ಳಗೆ, ಕರಂಕುರುಂ ಇತ್ತು ಗೊತ್ತಾ?

ಪಕ್ಕದ ಮನೆಯವಳು ಕಿಟಕಿ ತೆರೆದು ಹೇಳಿದಳು, ಅಂಕಲ್ ನೀವು ತಿಂದದ್ದು ಚಕ್ಕುಲಿ ಅಲ್ಲ, ಮಸ್ಕಿಟೊ ಕಾಯಿಲನ್ನ!

***

ಏನ್ ರಾಮಣ್ಣಾ, ವ್ಯಾಪಾರ ಜೋರಾ?

ಇಲ್ಲ ಕಣಣ್ಣಾ, ಬಿಸಿನೆಸ್ಸೇ ಇಲ್ಲ. ನಿನ್ನೆ ಇಡೀ ದಿನ ಮಾರಿದ್ದು, ಒಂದೇ ಒಂದು ಸೀರೆ!

ಈವತ್ತು ಹೇಗಿದೆ?

ಈವತ್ತು ಇನ್ನೂ ದೌರ್ಭಾಗ್ಯ. ಆ ಹೆಂಗಸು ಸೀರೆ ಸರಿಯಿಲ್ಲವೆಂದು ವಾಪಸ್ ಕೊಟ್ಟು ಬಯ್ದು ಹಣ ತೆಗೆದುಕೊಂಡು ಹೋದಳು...

***

ಅಮ್ಮ: ಮಗಳೇ ನೀನೀಗ ಮೇಜರ್. ಸೆಕ್ಸ್ ಬಗ್ಗೆ ನಿನ್ನಲ್ಲಿ ಚರ್ಚಿಸಲು ಸರಿಯಾದ ಸಮಯ.

ಮಗಳು: ಹೌದಮ್ಮ, ನಿನಗೇನು ಮಾಹಿತಿಬೇಕು, ಕೇಳು ಹೇಳ್ತೀನಿ.

***

ಲೇಡಿ ಡಾಕ್ಟರ್: ಅಲ್ಲಮ್ಮ, 2008ರಲ್ಲಿ ಒಂದು, 2009ರಲ್ಲಿ ಒಂದು! ನಂತರ ಏಕಮ್ಮಾ, ಮಕ್ಕಳೇ ಆಗಲಿಲ್ಲ?

ಮಹಿಳೆ: ಡಾಕ್ಟ್ರೇ 2010ರಲ್ಲಿ ನಾವು ಟಿ.ವಿ ಕೊಂಡು ಕೊಂಡೆವು.

***

ಮಹಿಳಾ ಕಾಲೇಜಿನ ಪ್ರಿನ್ಸಿಪಾಲಮ್ಮ ರಾಷ್ಟ್ರಧ್ವಜ ಖರೀದಿಸಲು ಅಂಗಡಿಗೆ ಹೋಗಿದ್ದರು. ಅಂಗಡಿಯವ ಏಳೆಂಟು ಧ್ವಜ ಹರಡಿ ತೋರಿಸಿದ. ಪ್ರಿನ್ಸಿಪಾಲಮ್ಮ, ಇದರಲ್ಲಿ ಬೇರೆ ಡಿಜೈನ್, ಬೇರೆ ಬಾರ್ಡರ್ ಇದ್ದವು ತೋರಿಸಪ್ಪಾ!

(ಸಂಗ್ರಹ) ಆದಿತ್ಯ ಕೆ. ಹೆಬ್ಬಾರ್

## ಹಾರೈಕೆ

ತಿಮ್ಮನ ವಿವಾಹ ಮಹೋತ್ಸವಕ್ಕೆ ಪಕ್ಕದ ನಗರದ ಸ್ವಾಮೀಜಿಗಳನ್ನು ಆಹ್ವಾನಿಸಲಾಗಿತ್ತು. ಮಾಂಗಲ್ಯಧಾರಣೆಯಾದ ಮೇಲೆ ಸ್ವಾಮೀಜಿಗಳು ಹಾರೈಸಿದರು.

ನೋಡ್ರಪ್ಪಾ, ಕೊರೊನಾ ಇದೆ ಹುಷಾರಾಗಿರ್ರಿ. ಸಾಮಾಜಿಕ ಅಂತರ ಕಾಪಾಡಿಕೊಂಡು, ಸದಾ ಮಾಸ್ಕ್ ಧರಿಸಿ ನೂರ್ಕಾಲ ಸುಖವಾಗಿ ಬಾಳಿ.

## ಹಣೆಬರಹ

ತಿಮ್ಮ ಮೆರವಣಿಗೆಯಲ್ಲಿ ಮನೆಗೆ ಹೊರಟಿದ್ದ. ಅವನ ಗೆಳೆಯ ಗುಮ್ಮನಿಗೆ ಆಚ್ಚರಿಯಾಯಿತು. ಹತ್ತಿರ ಹೋಗಿ ಕಿವಿಯಲ್ಲಿ ಕೇಳಿದ, ಏನು ತಿಮ್ಮ ಮೆರವಣಿಗೆಯಲ್ಲಿ ಹೊರಟಿದ್ದೀಯಲ್ಲ ಯಾಕೆ, ಏನಾಯ್ತು?

ತವರಿಗೆ ಹೋಗಿದ್ದ ನನ್ನ ಹೆಂಡತಿಗೆ ಕೊರೊನಾ ಪೊಸಿಟಿವ್ ಬಂದಿದೆ. ಕ್ವಾರಂಟೈನಿನಲ್ಲಿದೀನಿ. ನಾನು ತಿಂಗಳು ಮನೆಗೆ ಬರುವುದಿಲ್ಲ. ನಿಮ್ಮ ಅಡುಗೆಗೆ ಸಹಾಯವಾಗಲೀಂತ ನಾಳೆ ತಂಗಿಯನ್ನು ಕಳಿಸ್ತಿದೀನಿ. ಚಿಂತೆ ಮಾಡ್ಬೇಡಿ ಅಂತ ಈಗ ಫೋನ್ ಮಾಡಿದಳು ವಿವರಿಸಿದ ತಿಮ್ಮ, ನನ್ನ ಹಣೆಬರಹ ಚೆನ್ನಾಗಿಲ್ಲ ಎಂದು ಹಣೆ ಚಚ್ಚಿಕೊಂಡ ಗುಮ್ಮ.

## ವ್ಯತ್ಯಾಸ

ಆತ: ಕೊರೊನಾಕ್ಕೂ, ಹೆಂಡತಿಗೂ ಬಹಳ ವ್ಯತ್ಯಾಸವಿಲ್ಲ ಅನಿಸುತ್ತೆ ಮಾರಾಯಾ.

ಈತ: ಅದ್ಹೇಗೆ ಹೇಳುತ್ತೀ?

ಆತ: ಇವೆರಡನ್ನೂ ಮೊದಲೇ ನಿಯಂತ್ರಿಸಬೇಕು. ಆಗಲಿಲ್ಲ ಅಂದ್ರೆ ಅದರ ಜೊತೆಗೇ ಬದುಕಲು ಕಲಿತುಕೊಳ್ಳಬೇಕು.

## ಕರೆದುಕೊಂಡು ಹೋದಿರಲ್ಲ!

ಹೊಸದಾಗಿ ಮಾವನ ಮನೆಗೆ ಬಂದಿದ್ದ ತಿಮ್ಮನಿಗೆ ಹಳ್ಳಿಯಲ್ಲಿ ತುಂಬ ಬೋರಾಯಿತು. ಸಂಜೆ ಊರೊಳಗೆ ಅಡ್ಡಾಡಿ ಬರಲು ಹೊರಟ. ಊರ ಹೊರಗಡೆ ಬೇವಿನ ಕಟ್ಟೆಯ ಮೇಲೆ ಯುವಕರು ಕುಳಿತು ಹರಟೆ ಹೊಡೆಯುತ್ತಿದ್ದರು. ಅವರನ್ನಾದರೂ ಮಾತನಾಡಿಸಿದರಾಯಿತೆಂದು ಹತ್ತಿರ ಹೋಗಿ ಮಾತಿಗಿಳಿದ.

ಏನಯ್ಯಾ, ನೀವು ಟೈಂ ಪಾಸ್ ಹೇಗೆ ಮಾಡುತ್ತೀರಿ. ಇಲ್ಲಿ ನೋಡುವಂಥದ್ದೇನು ಇಲ್ವಾ?

ಇತ್ತು. ಅದನ್ನೂ ನೀವು ಕರೆದುಕೊಂಡು ಹೋದಿರಲ್ಲ. ಯುವಕರ ಮಾತಿಗೆ ತಣ್ಣಗಾದ.

## ಗೊತ್ತಿಲ್ಲ.

ತಿಮ್ಮ ಕವನವೊಂದನ್ನು ಬರೆದು ಪತ್ರಿಕೆಗೆ ಕಳಿಸಿದ. ಅದು ಪತ್ರಿಕೆಯಲ್ಲಿ ಪ್ರಕಟವೂ ಆಯಿತು. ಮರು ವಾರ ವಿಮರ್ಶೆಯೂ ಬಂತು. ಓದುಗರೊಬ್ಬರು ಈ ಕವನ ರಾಷ್ಟ್ರ ಕವಿ ಕುವೆಂಪು ಅವರದು ಎಂದು ದೂರಿದ. ಸಂಪಾದಕರು ಫೋನಾಯಿಸಿ ತಿಮ್ಮನನ್ನು ಕೇಳಿದರು, ನೀವು ಕೃತಿಚೌರ್ಯ ಮಾಡಬಾರದಿತ್ತು.

ಅಸಲಿಗೆ ಕುವೆಂಪು ಯಾರೆಂದೇ ನನಗೆ ಗೊತ್ತಿಲ್ಲ ಅಂದ ತಿಮ್ಮ. ಸಂಪಾದಕರಿಗೆ ಮೂರ್ಛೆ ಬರುವುದೊಂದೆ ಬಾಕಿ ಕವಿವರ್ಯನ ಮಾತು ಕೇಳಿ.

## ಕರಾರು!

ದೀಪಾವಳಿ ಶುಭಾಶಯ ಹೇಳಲು ತಿಮ್ಮನ ಮನೆಗೆ ಗುಂಡ ಬಂದ. ತಿಮ್ಮ ಸಪ್ಪೆಯಾಗಿದ್ದ, ಯಾಕೆ, ಹಬ್ಬದ ದಿನವಾದರೂ ಸಂತಸದಿಂದಿರಯ್ಯಾ. ಏನಾಗಿದೆ ನಿನಗೆ? ಕೇಳಿದ.

ಖುಷಿ ಪಡಕ್ಕಾಗಲ್ಲ. ಈ ವರ್ಷನಾದರೂ ಬಿಡುಗಡೆ ಸಿಗ್ಬದೆ ಎಂದಿದ್ದೆ ಆಗಲಿಲ್ಲ ವಿವರಿಸಿದ.

ಎಂಥ ಬಿಡುಗಡೆ? ಕೇಳಿದ.

ಒಂದು ವರ್ಷದ ಕರಾರಿನ ಮೇಲೆ ಮನೆಯಲ್ಲಿ ಅಡಿಗೆ ಮಾಡ್ತಿದೀನಿ. ಈಗ ಮತ್ತೆ ನನ್ನ ಹೆಂಡತಿ ಇನ್ನೊಂದು ವರ್ಷಕ್ಕೆ ಮುಂದುವರಿಸಿದಾಳೆ. ಇನ್ನೇನು ಮಾಡ್ಲಿ?

## ಮಾವನ ಪತ್ರ!

ಆತ: ಯಾಕೋ ತುಂಬ ಸಪ್ಪಗಾಗಿದ್ದೀಯಲ್ಲ?

ಈತ: ನಮ್ಮ ಮಾವನ ಪತ್ರ ಈಗ ತಾನೇ ಬಂತು.

ಆತ: ಬಂದರೇನಾಯ್ತು?

ಈತ: ಈ ವರ್ಷ ಕೊರೊನ ಕಾರಣದಿಂದ ದೀಪಾವಳಿ ಆಚರಿಸಲ್ಲ. ಊರಿಗೆ ಬರಬೇಡಿ ಅಂತ ಬರೆದಿದ್ದಾರೆ.

## ತಿಮ್ಮನ ಕವನ!

ದಸರ ಹಬ್ಬದ ಪ್ರಯುಕ್ತ ನಡೆದ ಕವಿಗೋಷ್ಠಿಗೆ ತಿಮ್ಮ ಹೆಸರು ನೋಂದಾಯಿಸಿದ್ದ. ಮುಂಜಾನೆ ಗಡಿಬಿಡಿಯಿಂದ ಕವನದ ಹಾಳೆಯನ್ನು ಜೇಬಿಗೆ ತುರುಕಿಕೊಂಡು ನಡೆದ.

ಸಮಯಕ್ಕೆ ಸರಿಯಾಗಿ ಗೋಷ್ಠಿ ಆರಂಭವಾಯಿತು. ವೇದಿಕೆಯಲ್ಲಿ ತಿಮ್ಮ ಆಸೀನನಾಗಿದ್ದ. ಅವನ ಪಾಳಿಯೂ ಬಂತು. ಕವನ ಓದುತ್ತಿದ್ದಂತೆ ಪ್ರೇಕ್ಷಕರು ಸಿಕ್ಕಾಪಟ್ಟೆ ಚಪ್ಪಾಳೆ ತಟ್ಟಿ ನಗತೊಡಗಿದರು.

ತಿಮ್ಮ ಅವಸರದಲ್ಲಿ ತಂದಿದ್ದ ದಿನಸಿ ಅಂಗಡಿಯ ಚೀಟಿಯನ್ನು ಕವನವೆಂದುಕೊಂಡು ಓದಿದ್ದ.

## ಮಾಸ್ಕನ ಉಪಯೋಗ

ಆತ: ಈ ಮಾಸ್ಕು ನನ್ನನ್ನು ಮೊನ್ನೆ ಬಚಾವ್ ಮಾಡಿತು ಮಾರಾಯಾ.

ಈತ: ಅದ್ಹೇಗೆ?

ಆತ: ಮೊನ್ನೆ ಡ್ರಗ್ ಕೇಸಲ್ಲಿ ನನ್ನನ್ನು ಆರೆಸ್ಟ್ ಮಾಡ್ಲಿಕ್ಕೆ ಪೊಲೀಸರು ಬಂದಿದ್ರು. ನಾನು ಮಾಸ್ಕ್ ಹಾಕ್ಕೊಂಡು ಕೂತಿದ್ದೆ. ನನ್ನ ಹೆಂಡ್ತಿ 'ಮನೆಯಲ್ಲಿಲ್ಲ ಹೊರಗೆ ಹೋಗಿದಾರೆ' ಅಂದ್ಲು ಸುಮ್ನೆ ಹೊಂಟೋದ್ರು ಗೊತ್ತಾ?

ಈತ: ಅಬ್ಬಾ, ಮಾಸ್ಕ್ ಇಷ್ಟೊಂದು ಉಪಯೋಗಕ್ಕೆ ಬರುತ್ತಾ?

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ